ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

# ಘಾನಾ ಸಮ್ಮೇಳನಕ್ಕೆ ವಿದಾಯ; ಯುರೋಪ್‌ನತ್ತ ಪಯಣ



ಹುಬ್ಬಳ್ಳಿ: ಅಕ್ಟೋಬರ್ 3ರಿಂದ 6ರವರೆಗೆ ಪಶ್ಚಿಮ ಆಫ್ರಿಕಾದ ರಾಜಧಾನಿ ಅಕ್ರ ನಗರದಲ್ಲಿ ನಡೆದ 66ನೆ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಈಗ ಯುರೋಪ್ ಕಡೆಗೆ ಪಯಣ ಬೆಳೆಸಿದ್ದೇವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಅತ್ಯಂತ ಪುಟ್ಟ ದೇಶವಾದ ಘಾನಾ ಈ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿತ್ತು. ಒಂದು ಸಮ್ಮೇಳನವನ್ನು ಅದರಲ್ಲೂ ಅಂತಾರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನು ಹೇಗೆ ನಡೆಸಬೇಕು ಎಂಬುದು ಇತರೆ ದೇಶಗಳಿಗೆ ಮಾದರಿಯಾಗುವಂತೆ ಸಂಘಟನೆಯಾಗಿದೆ. ನಾನು ಮತ್ತು ಇತರ ಅಧ್ಯಕ್ಷರು ಸೇರಿ ಅಕ್ರ ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಆರೋಗ್ಯ, ಶಿಕ್ಷಣ ಪದ್ಧತಿ, ನೈರ್ಮಲ್ಯದ ಬಗ್ಗೆ ಆ ಜನಗಳಿಗಿರುವ ಕಾಳಜಿ ಎಲ್ಲವನ್ನೂ ಅಧ್ಯಯನ ಮಾಡಲಾಯಿತು ಎಂದು ಹೊರಟ್ಟಿ ತಿಳಿಸಿದ್ದಾರೆ. ಇಂಧನ ಉಳಿಸುವಲ್ಲಿ ಪರಿಸರದ ಪಾತ್ರ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸುಧಾರಣೆ ಇತ್ಯಾದಿ ವಿಷಯಗಳ ಬಗ್ಗೆ ವಿವರವಾದ ಚರ್ಚೆಗಳು ನಡೆದವು. ಅ.9ರಿಂದ ಯುರೋಪ್ ದೇಶಗಳಾದ ಇಟಲಿ, ರೋಮ್, ಸ್ವಿಜ್ಜರ್‌ಲ್ಯಾಂಡ್, ಪ್ಯಾರಿಸ್, ಲಂಡನ್ ಮುಂತಾದ ಕಡೆಗಳಲ್ಲಿ ನಮ್ಮ ತಂಡದ ಪ್ರವಾಸ ನಡೆಯಲಿದ್ದು, ಎಲ್ಲಡೆಯಲ್ಲಿಯೂ ಅಲ್ಲಿನ ವಿವಿಧ ಕ್ಷೇತ್ರಗಳಲ್ಲಿನ ಪ್ರಗತಿಗಳ ಬಗ್ಗೆ ಅಧ್ಯಯನ ನಡೆಸಲಿದೆ ಎಂದು ಬಸವರಾಜ ಹೊರಟ್ಟಿ ಹೇಳಿದರು.

# ಘಾನಾ ಸಮ್ಮೇಳನಕ್ಕೆ ವಿದಾಯ; ನಮ್ಮ ತಂಡದ ನಡಿಗೆ ಯುರೋಪ್ ಕಡೆಗೆ : ಬಸವರಾಜ ಹೊರಟ್ಟಿ

ಗದಗ, 8. ಅಕ್ಟೋಬರ್ 3ರಿಂದ 6ರ ವರೆಗೆ ಪಶ್ಚಿಮ ಆಫ್ರಿಕಾದ ರಾಜಧಾನಿ ಅಕ್ರ ನಗರದಲ್ಲಿ ನಡೆದ 66ನೆ ಕಾಮನ್‌ವೆಲ್ತ್‌ಪಾರ್ಲಿಮೆಂಟ್ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈಗ ನಮ್ಮ ನಡಿಗೆ ಯುರೋಪ್ ಕಡೆಗೆ.

ಘಾನಾ ಸಮ್ಮೇಳನದ ಸವಿ ನೆನಪುಗಳನ್ನು ಮೆಲುಕು ಹಾಕುವುದಾದರೆ ಅತ್ಯಂತ ಪುಟ್ಟ ದೇಶವಾದ ಘಾನಾ ಈ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿತ್ತು. ಅಲ್ಲಿ ಯಾವುದಕ್ಕೂ ಕೊರತೆಯೆಂಬುದು ಇರಲಿಲ್ಲ. ಒಂದು ಸಮ್ಮೇಳನವನ್ನು ಅದರಲ್ಲೂ ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನು ಹೇಗೆ ನಡೆಸಬೇಕು ಎಂಬುದು ಇತರೆ ದೇಶಗಳಿಗೆ ಮಾದರಿಯಾಗುವಂತೆ ಈ ಸಮ್ಮೇಳನದ ಸಂಘಟನೆಯಾದದ್ದು ನಮಗೆಲ್ಲ ಅತ್ಯಂತ ಸಂತೋಷ ಮತ್ತು ಅಭಿಮಾನದ ಸಂಗತಿಯಾಗಿದೆ.

ನಾನು ಮತ್ತು ಇತರ ಅಧ್ಯಕ್ಷರು ಸೇರಿ ಅಕ್ರ ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಆರೋಗ್ಯ, ಶಿಕ್ಷಣ ಪದ್ಧತಿ, ನೈರ್ಮಲ್ಯದ ಬಗ್ಗೆ ಆ ಜನಗಳಿಗಿರುವ ಕಾಳಜಿ ಎಲ್ಲವನ್ನೂ ಅಧ್ಯಯನ ಮಾಡಲಾಯಿತು. ಅಲ್ಲಿನ ಮಕ್ಕಳೊಂದಿಗೆ ಸ್ವಲ್ಪ ಹೊತ್ತು ಕಳೆದದ್ದು ಅತೀವ ಆನಂದವನ್ನು ನೀಡಿತು. ಅಲ್ಲಿನ ನೈಸರ್ಗಿಕ ಸಂಪತ್ತು, ಗಾಳಿ, ಪರಿಸರ ಇತ್ಯಾದಿಗಳ ಬಗ್ಗೆಯೂ ಹಲವಷ್ಟು ವಿಷಯಗಳನ್ನು ತಿಳಿದುಕೊಳ್ಳಲಾಯಿತು. ಅಲ್ಲಿನ ಆ ಪರಿಸರ ನಮಗೆ ವಿಶೇಷ ಆನಂದವನ್ನುಂಟು ಮಾಡಿತಲ್ಲದೆ, ಅದು ತುಂಬಾ ಅಪ್ಯಾಯಮಾನವಾಗಿಯೂ



ಇತ್ತು. ಆ ಜನಗಳ ಮಧ್ಯದಲ್ಲಿದ್ದಾಗ ನಾವೇನು ಈ ದೇಶದಲ್ಲಿದ್ದೇವೆಯೋ ಅಥವಾ ನಮ್ಮೂರಿನಲ್ಲಿಯೆ ಇದ್ದೇವೆಯೋ ಎಂಬ ಅನುಮಾನ ಬರುವಷ್ಟು ಚೆನ್ನಾಗಿ ಅವರು ನಮಗೆ ಆತಿಥ್ಯವನ್ನು ನೀಡಿದರು.

ದೇಶವಿದೇಶಗಳಿಂದ ಬಂದಿದ್ದ ನೂರಾರು ಪ್ರತಿನಿಧಿಗಳು ತಮ್ಮ ತಮ್ಮ ದೇಶದ ವೈಶಿಷ್ಟ್ಯತೆಗಳನ್ನು ಎಲ್ಲರೊಂದಿಗೆ ಹಂಚಿಕೊಂಡು ಸಂತಸಪಟ್ಟರು. ಇದರಿಂದ ಬೇರೆ ಬೇರೆ ದೇಶಗಳ ಜನತೆಯ ಆಚಾರ ವಿಚಾರಗಳು, ಆಹಾರ ಕ್ರಮಗಳು, ಪರಿಸರ, ಜನರ ದೈನಂದಿನ ಬದುಕು ಇವೆಲ್ಲವುಗಳನ್ನೂ ಅರಿಯಲು ಈ ಸಮ್ಮೇಳನ ನಮಗೆ ಬಹಳಷ್ಟು ಸಹಾಯ ಮಾಡಿತು.

ಈ ಸಮ್ಮೇಳನದಿಂದ ನಾವು ತಿಳಿದ ಮಹತ್ವದ ವಿಷಯಗಳೇನೆಂದರೆ– ಇಂಧನ ಉಳಿಸುವಲ್ಲಿ ಪರಿಸರಗಳ ಪಾತ್ರ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳಸುಧಾರಣೆ, ಆಡಳಿತ ಯಂತ್ರವನ್ನು ಚುರುಕುಗೊಳಿಸುವುದು ಹೇಗೆ? ಪ್ರಜಾಪ್ರಭುತ್ವದ ಮಹತ್ವ, ಅಂತರಾಷ್ಟ್ರೀಯ ಸಂಬಂಧಗಳು, ಆರೋಗ್ಯ, ಶಿಕ್ಷಣ, ಆಹಾರ, ದೇಶ ಕಟ್ಟುವಲ್ಲಿ ಜನ ಪ್ರತಿನಿಧಿಗಳ ಪಾತ್ರ ಇತ್ಯಾದಿ ವಿಷಯಗಳ ಬಗ್ಗೆ ವಿವರವಾದ ಚರ್ಚೆಗಳು ನಡೆದವು. ಅವುಗಳಲ್ಲಿ ನಮಗೆ ಬೇಕಾದ, ನಮ್ಮ ಪರಿಸರಕ್ಕೆ ಅನುಕೂಲವಾಗುವ ಅನೇಕ ಮಹತ್ವದ ಸಂಗತಿಗಳನ್ನು ನಾವು ಪಡೆದುಕೊಂಡೆವು. ದೇಶವಿದೇಶಗಳ ಪ್ರತಿನಿಧಿಗಳ ಒಡನಾಟದೊಂದಿಗೆ ನಮಗೆ ನಾಲ್ಕು ದಿನಗಳು ಹೇಗೆ ಕಳೆದವು ಎಂಬುದೇ ತಿಳಿಯಲಿಲ್ಲ. ನಾವೆಲ್ಲರೂ ಅಷ್ಟೊಂದು ಆತ್ಮೀಯತೆಯಿಂದ ಇದ್ದು, ಹೊಸತನ್ನು ಕಲಿತು ಈ ದೇಶದಿಂದ ಮುಂದಿನ ಪ್ರಯಾಣಕ್ಕಾಗಿ ಯುರೋಪ್ ದೇಶಗಳತ್ತ ಪ್ರಯಾಣ ಬೆಳೆಸಿದೆವು.

ನಮ್ಮ ಪಯಣವು ಬರುವ ದಿನಾಂಕ 9ರಿಂದ ಯುರೋಪ್ ದೇಶಗಳಾದ ಇಟಲಿ, ರೋಮ್, ಸ್ವಿಜ್ಜರ್‌ಲ್ಯಾಂಡ್, ಪ್ಯಾರಿಸ್, ಲಂಡನ್ ಮುಂತಾದ ಕಡೆಗಳಲ್ಲಿ ನಮ್ಮ ತಂಡದ ಪ್ರವಾಸ ನಡೆಯಲಿದ್ದು, ಎಲ್ಲೆಡೆಯಲ್ಲಿಯೂ ಅಲ್ಲಿನ ವಿವಿಧ ಕ್ಷೇತ್ರಗಳಲ್ಲಿನ ಪ್ರಗತಿಗಳ ಬಗ್ಗೆ ಅಧ್ಯಯನ ನಡೆಸಲಿದೆ. ಅಲ್ಲಿಗೆ ಹೋದ ಮೇಲೆ ಅಲ್ಲಿನ ಮಹತ್ವದ ಮತ್ತು ವೈಶಿಷ್ಟ್ಯಪೂರ್ಣ ಸಂಗತಿಗಳನ್ನು ಮತ್ತೆ ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

# ಘಾನ ಸಮ್ಮೇಳನಕ್ಕೆ ವಿದಾಯ
# ಯುರೋಪಗೆ ತೆರಳಿದ ಹೊರಟ್ಟಿ



**ಆಫ್ರಿಕಾ.** ಕಳೆದ ದಿನಾಂಕ 3 ರಿಂದ 6ರವರೆಗೆ ಪಶ್ಚಿಮ ಆಫ್ರಿಕಾದ ಗಾಣದ ರಾಜಧಾನಿ ಅಕ್ರ ನಗರದಲ್ಲಿ ನಡೆದ "66ನೇ ಕಾಮನ್ವೆಲ್ ಪಾರ್ಲಿಮೆಂಟ್ ಸಮ್ಮೇಳನ' (ಸಿ.ಪಿ.ಸಿ) ಅತ್ಯಂತ ಯಶಸ್ವಿಯಾಗಿ ನಡೆಯಿತು.

ಪುಟ್ಟದಾದ ದೇಶ ಗಾನ" ಬೆಟ್ಟದಷ್ಟು ಕನಸುಗಳನ್ನು ಹೊತ್ತು ಅತ್ಯಂತ ಸುಸಜ್ಜಿತವಾಗಿ ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನ ಸಂಘಟಿಸಿತ್ತು. ಯಾವುದಕ್ಕೂ ಕೊರತೆಯಾಗ ದಂತೆ ನೋಡಿಕೊಂಡಿದ್ದು ವಿಶೇಷ. ನಾಲ್ಕು ದಿನಗಳ ಕಾಲ ಅಕ್ರ ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಶಿಕ್ಷಣ ಆರೋಗ್ಯ ವಸತಿ ದೈನಂದಿನ ಜನಜೀವನದ ಕುರಿತು ತಿಳಿದು ಕೊಳ್ಳಲಾಯಿತು. ಅಲ್ಲಿನ ನೈಸರ್ಗಿಕ ಸಂಪತ್ತು ಪರಿಸರ ಗಾಳಿ ಬೆಳಕು ಅತ್ಯಂತ ಖುಷಿಕೊಡುವ ಸಂಗತಿಯ ವಿಚಾರ. ಜೊತೆಗೆ ಅಲ್ಲಿನ ಕನ್ನಡಿಗರ ಪ್ರೀತಿ ಗೌರವ ಸನ್ಮಾನಗಳು ಆತಿತ್ಯ ಊಟ ಉಪ ಚಾರಗಳು ಎಂದೂ ಮರೆಯದ ಸಂಗತಿಗಳು. ಅವರ ಮಧ್ಯೆ ಇದ್ದಾಗ ನಮ್ಮೂರಿನಲ್ಲಿ ಇದ್ದೇವೆ ಎಂಬ ಭಾವ ಮೂಡಿದ್ದಂತು ಸತ್ಯ.

ದೇಶ ವಿದೇಶದಿಂದ ಬಂದ ನೂರಾರು ದೇಶಗಳ ಪ್ರತಿನಿಧಿಗಳು ತಮ್ಮ ತಮ್ಮ ದೇಶದ ವೈಶಿಷ್ಟ್ಯವನ್ನ ಸಮ್ಮೇಳನದಲ್ಲಿ ಪ್ರದರ್ಶಿಸಿದರು.

ನಾಲ್ಕು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಇಂಧನ ಉಳಿಸುವಲ್ಲಿ ಪರಿಸರಗಳ ಪಾತ್ರ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸುಧಾರಣೆ, ಆಡಳಿತ ಯಂತ್ರವನ್ನು ಚುರುಕುಗೊಳಿಸುವುದು, ಪ್ರಜಾಪ್ರಭುತ್ವದ ಮಹತ್ವ, ಅಂತರಾಷ್ಟ್ರೀಯ ಸಂಬಂಧಗಳು, ಆರೋಗ್ಯ ,ಶಿಕ್ಷಣ, ಆಹಾರ, ದೇಶ ಕಟ್ಟುವಲ್ಲಿ ಜನಪ್ರತಿನಿಧಿಗಳ ಪಾತ್ರ, ಹೀಗೆ ಹತ್ತಾರು ಮಹತ್ವದ ವಿಷಯಗಳು ಕುರಿತು ನಾಲ್ಕು ದಿನಗಳ ಕಾಲ ಚಿಂತನ ಮಂಥನ ನಡೆಯುವುದರ ಜೊತೆಗೆ ಹಲವಾರು ಪರಿಹಾರೋಪಾಯಗಳನ್ನ ಕಂಡುಕೊಳ್ಳಲಾಯಿತು. ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಜರುಗಿತು. ನನ್ನ ನಾಲ್ಕು ದಶಕಗಳ ಸಾರ್ವಜನಿಕ ಬದುಕಿನಲ್ಲಿ ಈ ಪ್ರವಾಸ ಸಮ್ಮೇಳನ ಎಂದು ಮರೆಯದ ಸಂಗತಿ. ಸಾಕಷ್ಟು ಸಂಗತಿಗಳನ್ನು ವಿಷಯಗಳನ್ನು ಈ ಸಮ್ಮೇಳನದ ಮೂಲಕ ತಿಳಿದುಕೊಳ್ಳಲಾಯಿತು. ದೇಶವಿದೇಶದಿಂದ ಆಗಮಿಸಿದ ಸಾವಿರಾರು ಜನಪ್ರತಿನಿಧಿಗಳ ಒಡನಾಟ ಅವರೊಂದಿಗಿನ ಪ್ರೀತಿ ಸ್ನೇಹದಿಂದ ದಿನಗಳು ಓದಿದ್ದೆ ಗೊತ್ತಾಗಲಿಲ್ಲ. ಪಶ್ಚಿಮ ಆಫ್ರಿಕಾದ ಪ್ರವಾಸ ಸದಾಕಾಲ ನೆನಪು ಇರುವಂತದ್ದು.

ದಿನಾಂಕ 9 ರಿಂದ ಯುರೋಪ್ ದೇಶಗಳಾದ ಇಟಲಿ, ರೋಮ್, ಸ್ವಿಜಲ್ಯಾಂಡ್, ಪ್ಯಾರಿಸ್, ಲಂಡನ್ ನಲ್ಲಿ ವಿವಿಧ ಕ್ಷೇತ್ರಗಳ ಅಧ್ಯಯನಕ್ಕಾಗಿ ನಮ್ಮ ತಂಡ ಪ್ರವಾಸ ಕೈಗೊಳ್ಳಲಿದೆ. ಮುಂದಿನ ಸಂಗತಿಗಳನ್ನು ಮತ್ತೆ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಎಂದು ಸಭಾ ನಾಯಕ ಬಸವರಾಜ್ ಹೊರಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.